ಈ) 2002-03ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ತಂಬಾಕು ಬೆಳೆಗಾರರಿಗೆ 41.70 ದಶಲಕ್ಷ ಕೆ.ಜಿ.ಗಳ ಉತ್ಪಾದನಾ ಗುರಿಯನ್ನು ತಂಬಾಕು ಮಂಡಳಿ ನಿಗಧಿಪಡಿಸಿದೆ.

ಉ) ಪ್ರಸಕ್ತ ತಂಬಾಕಿಗೆ ನಿಗದಿಪಡಿಸುತ್ತಿರುವ ಬೆಂಬಲ ಬೆಲೆಯನ್ನು ಹೆಚ್ಚಿಸುವ ಬಗ್ಗೆ ತಂಬಾಕು ಮಂಡಳಿಯ ಎಲ್ಲಾ ಸಭೆಗಳಲ್ಲಿಯೂ ರಾಜ್ಯ ಮಾನ್ಯ ಕೃಷಿ ಸಚಿವರು ನಡೆಸಿದ ದಿನಾಂಕ 8-2-2002ರ ಸಭೆಯಲ್ಲಿ ದಿನಾಂಕ:21-5-2002 ರಂದು ನಡೆದ ತಂಬಾಕು ಮಂಡಳಿಯ ಸಭೆಯಲ್ಲಿ ಹಾಗೂ ದಿನಾಂಕ: 13-7-2002 ರಂದು ಬೆಂಗಳೂರಿನಲ್ಲಿ ನಡೆದ ಪಾರ್ಲಿಮೆಂಟರಿ ಉಪ ಸಮಿತಿ ಸಭೆಯಲ್ಲೂ ಸಹ ಒತ್ತಾಯ ಪಡಿಸಲಾಗಿದೆ.

ಅಡಮಾನ ಸಾಲ ಯೋಜನೆ

686(876) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಸರಕಾರ ರೈತರ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ದೊರೆಯದಿದ್ದರೆ"ಅಡಮಾನ ಸಾಲ ಯೋಜನೆಯ" ಲಾಭ ಪಡೆದಿರುವ ಮಾರುಕಟ್ಟೆಗಳು ವಿವರ ಯಾವ ಉತ್ಪನ್ನಗಳಿಗೆ ಎಷ್ಟು ಪ್ರಮಾಣ ಹಣ ಸಹಾಯ ಮತ್ತು ವೇರ್‌ಹೌಸ್(ದಾಸ್ತಾನು ಉಗ್ರಾಣದ) ಅವಕಾಶ ವಗೈರೆ ವ್ಯವಸ್ಥೆಯನ್ನು ಸರ್ಕಾರ ಮಾಡಿರುವುದೆ?

ಆ) ಹುಬ್ಬಳ್ಳಿ ಧಾರವಾಡ ಮಾರುಕಟ್ಟೆಗಳಿಗೆ ಬರುವ ರೈತರ ಉತನ್ನ (ಹುಟ್ಟುವಳಿ)ಗಳು ಯಾವುವು; ಅದರಲ್ಲಿ ಯಾವ ಹುಟ್ಟುವಳಿಗಾಗಿ ಅಡಮಾನ ಸಾಲ ನೀಡಿದ್ದೀರಿ; ಪ್ರತಿ ಉತ್ಪನ್ನಗಳ ಪ್ರಮಾಣ ಸಾಲದ ಹಣ ಮತ್ತು ಉಗ್ರಾಣದಲ್ಲಿ ಸರ್ಕಾರ ಅವಕಾಶ ಮಾಡಿರುವುದು;

ಇ) ಧಾರವಾಡದಲ್ಲಿ ಮತ್ತು ಹುಬ್ಬಳ್ಳಿಯ ಮಾರುಕಟ್ಟೆಗಳಲ್ಲಿ ಎಷ್ಟು ಪ್ರಮಾಣದ ಉತ್ಪನ್ನಗಳನ್ನು ಸಂರಕ್ಷಿಸಲು ಉಗ್ರಾಣಗಳ ವ್ಯವಸ್ಥೆ ರೈತರಿಗಾಗಿ ಕಾಯ್ದಿರಿಸಿದೆ; ಎರಡೂ ಮಾರುಕಟ್ಟೆ ವಿವರ ತಿಳಿಸುವಿರಾ?

ಶ್ರೀ ಬಿ.ಎಸ್. ಪಾಟೀಲ್(ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :

ಅ) ದಿನಾಂಕ: 27-1-94 ರಿಂದ ಸಣ್ಣ ಮತ್ತು ಅತೀ ಸಣ್ಣ ರೈತರ ಹುಟ್ಟುವಳಿಗಳನ್ನು ಸಮಿತಿಯ ಗೋದಾಮುಗಳಲ್ಲಿ ಹಾಗೂ ಕೇಂದ್ರ ಮತ್ತು ರಾಜ್ಯ ಉಗ್ರಾಣ ನಿಗಮಗಳಲ್ಲಿ ದಾಸ್ತಾನಿಟ್ಟು ನೀಡುವ ರಸೀದಿಯ ಆಧಾರದ ಮೇಲೆ ಅಲ್ಪಾವಧಿ ಮುಂಗಡ ನೀಡಲು ನಿಯಮಗಳನ್ನು ರಚಿಸಲಾಗಿದೆ. ಈ ನಿಯಮದಡಿ ಅಲ್ಪಾವಧಿ ಮುಂಗಡ ನೀಡಿರುವ ಸಮಿತಿಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.

ಆ) ವಿವರ ಅನುಬಂಧ-2 ಮತ್ತು 3 ರಲ್ಲಿ ನೀಡಿದೆ.

ಇ) ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 10,000 ಮೆ.ಟನ್ ಸಾಮರ್ಥ್ಯದ ಎರಡು ಗೋದಾಮುಗಳು ಹಾಗೂ ಧಾರವಾಡದಲ್ಲಿ ಸದರಿ ಉಗ್ರಾಣ ನಿಗಮದ 5 ಉಗ್ರಾಣಗಳಿದ್ದು ಸಂಗ್ರಹಣಾ ಸಾಮರ್ಥ್ಯ 1492 ಮೆ.ಟನ್ ಆಗಿರುತ್ತದೆ. ಇಲ್ಲಿ ಉತ್ಪನ್ನಗಳನ್ನು ಸಂರಕ್ಷಿಸಲು ವ್ಯವಸ್ಥೆ ಮಾಡಲಾಗಿದೆ.

ಅನುಬಂಧ-1

ಕ್ರ. ಸಂ	ಸಮಿತಿಯ ಹೆಸರು	ಉತ್ಪನ್ನಗಳ ಹೆಸರು	ಅಡಮಾನ ಸಾಲದ ಹಣ	ಸಮಿತಿ ಗೋದಾಮು	ವೇರ್ ಹೌಸ್ ಗೋದಾಮು	ಷರಾ
1	2	3	4	5	6	7
1.	ಚಳ್ಳಕೆರೆ	ಶೇಂಗಾ, ಸೂರ್ಯಕಾಂತಿ	18,000-00		ಹೌದು	
2.	ಚಿತ್ರದುರ್ಗ	ಬಿಳಿಜೋಳ, ಕಡ್ಲೆಕಾಳು	1,52,000-00		"	
3.	ಶಿವಮೊಗ್ಗ	ಭತ್ತ, ಅಡಿಕೆ	9,80,000-00		"	
4.	ಸಾಗರ	ಭತ್ತ, ಅಡಿಕೆ	36,60,950-00		"	
5.	ದಾವಣಗೆರೆ	ಮೆಕ್ಕೆಜೋಳ	16,40,000-00		"	
6.	ತುಮಕೂರು	ಸೀಗೆಕಾಯಿ	2,07,286-00		"	
7.	ಚೆನ್ನಪಟ್ಟಣ	ಭತ್ತ, ಎಳ್ಳು	3,11,500-00		"	
8.	ಭದ್ರಾವತಿ	ಭತ್ತ	25,000-00		"	
9.	ತಿಪಟೂರು	ಕೊಬ್ಬರಿ	1,50,000-00		"	
10.	ಶಿರಾ	ಅಡಿಕೆ	24,500-00		"	
11.	ಕೊಳ್ಳೇಗಾಲ	ಭತ್ತ, ಅರಿಶಿನ	3,81,000-00		"	
12.	ಅರಸೀಕೆರೆ	ತೆಂಗಿನಕಾಯಿ	22,56,000-00		"	
13.	ಕಡೂರು	ಸೂರ್ಯಕಾಂತಿ	69,000-00	ಹೌದು		
14.	ಹಾಸನ	ಆಲೂಗೆಡ್ಡೆ	63,000-00		"	
15.	ಪುತ್ತೂರು	ಅಡಿಕೆ, ಕಾಳುಮೆಣಸು	10,54,000-00		"	
16.	ಮಾನ್ವಿ	ಭತ್ತ	35,86,000-00		"	
17.	ಬೀದರ್	ಉದ್ದು,ಹೆಸರು, ಅಕ್ಕಿ ಕಳವಿ	44,03,000-00		"	
18.	ಸೇಡಂ	ಭತ್ತ	42,000-00		"	
19.	ಚಿತ್ತಾಪುರ	ತೊಗರಿ, ಕಡಲೆ	12,01,000-00		"	
20.	ಗುಲ್ಬರ್ಗಾ	ತೊಗರಿ, ಕಡಲೆ	33,27,000-00		"	
21.	ಸಿಂಧನೂರು	ಭತ್ತ	1,67,30,000-00		"	
22.	ರಾಯಚೂರು	ಭತ್ತ, ಜೋಳ	4,25,650-00		"	
23.	ಗಂಗಾವತಿ	ಭತ್ತ	1,70,88,526-00	ಹೌದು		
24.	ಬಳ್ಳಾರಿ	ಮೆಕ್ಕೆಜೋಳ	2,56,000-00	"		
25.	ಸಿರಗುಪ್ಪ	ಭತ್ತ	13,85,000-00		"	
26.	ಹುಬ್ಬಳ್ಳಿ	ಗೋಧಿ, ಕಡಲೆ, ಹೆಸರು, ಶೇಂಗಾ	2,00,700-00		"	
27.	ರಾಮದುರ್ಗ	ಗೋವಿನ ಜೋಳ, ಗೋಧಿ, ಜೋಳ, ಸೂರ್ಯಕಾಂತಿ	24,51,000-00		"	

1	2	3	4	5	6	7
28.	ಮಹಾಲಿಂಗಪುರ	ಕಡಲೆ, ಗೋಧಿ, ಜೋಳ,	1,37,000-00		"	
29.	ಸವದತ್ತಿ	ಗೋವಿನಜೋಳ	1,44,000-00	ಹೌದು		
30.	ಹಾವೇರಿ	ಗೋವಿನಜೋಳ	2,92,000-00		"	
31.	ರಾಣೆಬೆನ್ನೂರು	ಗೋವಿನಜೋಳ	2,90,870-00		"	
32.	ಬಿಜಾಪುರ	ಜೋಳ, ಗೋಧಿ	69,000-00	ಹೌದು		
33.	ದಾರವಾಡ	ಕಡಲೆ	24,000-00		"	
34.	ಬೈಲಹೊಂಗಲ	ಬೆಲ್ಲ	1,920-00	ಹೌದು		

ಅನುಬಂಧ-2

ರೈತರ ಉತ್ಪನ್ನಗಳು

ಹುಬ್ಬಳ್ಳಿ	ಧಾರವಾಡ
1. ಹತ್ತಿ	1. ಹತ್ತಿ
2. ಶೇಂಗಾ	2. ಜೋಳ
3. ಒಣಮೆಣಸಿನಕಾಯಿ	3. ಗೋಧಿ
4. ಅಹಾರಧಾನ	4. ಗೋವಿನ ಜೋಳ
5. ಎಣ್ಣೆಕಾಳುಗಳು	5. ಹೆಸರು
6. ಇತರೆ ಹುಟ್ಟುವಳಿಗಳು	6. ಕಡಲೆ
	7. ಅಲಸಂದೆ
	8. ಸೋಯಾಬಿನ್
	9. ಕುಸುಬೆ
	10. ಶೇಂಗಾಕಾಯಿ

ಅನುಬಂಧ-3

ಅಡಮಾನ ಸಾಲ ನೀಡಿರುವ ಉತ್ಪನ್ನಗಳು ಹಾಗೂ ಮೊತ್ತ

ಹುಬ್ಬಳ್ಳಿ			ಧಾರವಾಡ		
ಉತ್ಪನ್ನಗಳು	ಕ್ವಿಂಟಾಲ್‌ಗಳಲ್ಲಿ	ಅಡಮಾನ ಸಾಲ ಮೊತ್ತ	ಉತ್ಪನ್ನಗಳು	ಕ್ವಿಂಟಾಲ್‌ಗಳಲ್ಲಿ	ಅಡಮಾನ ಸಾಲ ಮೊತ್ತ
1. ಜೋಳ	227.82	52,500-00	ಕಡಲೆ	25	24,000-00
2. ಗೋಧಿ	114.14	41,100-00			
3. ಕಡಲೆ	161.70	73,200-00			
4. ಹೆಸರು	42.85	23,800-00			
5. ಶೇಂಗಾ	15.54	10,100-00			